

# ನೆನಪುಗಳನ್ನು ಕಟ್ಟಿಕೊಡುವ ಛಾಯಾಚಿತ್ರ!

■ ವೆಂಕಟರಾಜು ಕೆ. ಬೆಂಗಳೂರು

ಒಂದು ಛಾಯಾಚಿತ್ರಕ್ಕೂ ಎಷ್ಟು ಮಹತ್ವವಿರುತ್ತದೆ; ಅದರಲ್ಲೂ ಹಳೆಯ ಕಾಲದ ಕಪ್ಪು ಬಿಳುಪು ಚಿತ್ರ ಎಂದೆಂದಿಗೂ ಸವಿನೆನಪಿನ ದೀವಿಗೆಯಾಗಿ ಬೆಳಗುತ್ತದೆ. ನೆನಪುಗಳು ಎಂದಿಗೂ ಮಧುರಾತಿಮಧುರ. ನೋವನ್ನು ಕಳೆಯಲು, ಬೇಸರ ನೀಗಿಸಲು ನೆನಪುಗಳು ಸದಾ ಸಹಕಾರಿ. ಕಾಲೇಜು ಜೀವನ ಬದುಕಿನುದ್ದಕ್ಕೂ ಸವಿನೆನಪಿನ ಬುತ್ತಿಯನ್ನು ಉಣ ಬಡಿಸುತ್ತಾ ಇರುತ್ತದೆ. ನನ್ನ ಜೀವನದಲ್ಲೂ ಕಾಲೇಜು ಜೀವನದ ಒಂದು ಫೋಟೊ ಸದಾ ನೆನಪಿನ ಜೋಕಾಲಿಯಾಗಿ ನನ್ನೊಂದಿಗಿದೆ.

'ಜೀವನ ನಶ್ವರ ಛಾಯಾಚಿತ್ರ ಶಾಶ್ವತ' ಇದು ತೆಲುಗು ಕವಿತೆಯೊಂದರ ಸಾಲು. ಈ ಮೇಲಿನ ಫೋಟೊಗೆ ಬರೋಬ್ಬರಿ 48 ವರ್ಷ. ಒಮ್ಮೆ ನಿಂತು ಹೋಗಿದ್ದ ಅಂತರ ಕಾಲೇಜು ಯುವಜನೋತ್ಸವವನ್ನು ಮೈಸೂರು ವಿಶ್ವವಿದ್ಯಾನಿಲಯ, 1969 ರ ಡಿಸೆಂಬರ್‌ನಲ್ಲಿ ಪುನರಾರಂಭಿಸಿತು. ಈ ಉತ್ಸವದಲ್ಲಿ ನಮ್ಮ ಜೆ.ಎಸ್.ಎಸ್ ಕಾಲೇಜು, ಚಾಮರಾಜನಗರ ಭಾಗವಹಿಸಿತ್ತು. ಆ ವೇಳೆಗೆ ಕಾಲೇಜು ಆರಂಭವಾಗಿ ಕೇವಲ 3 ವರ್ಷವಾಗಿತ್ತು. ಆಗ ಕಾಲೇಜಿನ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಹೆಚ್ಚೆಂದರೆ ಸುಮಾರು 150 ಇರಬಹುದು. ಈಗ ಇದು ಸಾವಿರಾರು ಮಂದಿ ಕಲಿಯುತ್ತಿರುವ ಮಹಿಳಾ ಕಾಲೇಜಾಗಿದೆ. ಆಗ ಹಾಗಿರಲಿಲ್ಲ.

ಈ ಉತ್ಸವದ ಭಾಗವಾಗಿ, ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನ, ಮಹಾರಾಜ ಕಾಲೇಜಿನ ಸೀನಿಯರ್ ಮತ್ತು ಜೂನಿಯರ್ ಬಿ.ಎ ಹಾಲ್‌ಗಳಲ್ಲಿ, ನಾಟಕ, ಚರ್ಚಾಸ್ಪರ್ಧೆ ಮತ್ತು ಇನ್ನಿತರ ಸ್ಪರ್ಧೆಗಳು ನಡೆದವು. ವಿದ್ಯಾರ್ಥಿಗಳಿಗೆ ಮಹಾರಾಜ ಮತ್ತು ಯುವರಾಜ ಕಾಲೇಜಿನಲ್ಲಿ, ವಿದ್ಯಾರ್ಥಿನಿಯರಿಗೆ ಮಹಾರಾಣಿ ಕಾಲೇಜಿನ ಹಾಸ್ಟೆಲ್‌ನಲ್ಲಿ ವಾಸ್ತವ್ಯ. ಭಾಗವಹಿಸಿದ ಕಾಲೇಜು ತಂಡಗಳಿಗೆ ಮಹಾರಾಜ ಕಾಲೇಜಿನ ಕ್ಯಾಂಟೀನ್ ನಲ್ಲಿ ಊಟ, ತಿಂಡಿ ವ್ಯವಸ್ಥೆ. ವಿದ್ಯಾರ್ಥಿ ಕ್ಷೇಮಪಾಲಕರಾಗಿದ್ದ, ಹಿರಿಯ ಲೇಖಕ ಉ.ಕಾ. ಸುಬ್ಬರಾಯಾಚಾರ್ಯರ ಉಸ್ತುವಾರಿ. ಮಹಾರಾಜ ಕಾಲೇಜಿನ ಹಂಗಾಮಿ ಉಪನ್ಯಾಸಕರಾಗಿದ್ದ ದಿ. ಶ್ರೀ ಕೃಷ್ಣ ಆಲನಹಳ್ಳಿ ಮತ್ತು ವಿದ್ಯಾರ್ಥಿ ದಿ. ಉಮ್ಮರಬ್ಬ ಸ್ವಯಂ ಸೇವಕರಂತೆ ಕೆಲಸ ಮಾಡುತ್ತಿದ್ದರು. ಮಹಾರಾಜ ಕಾಲೇಜಿನ ಕ್ಯಾಂಪಸ್ ಎಂದು ಕರೆಯಬಹುದಾದ ಇಡೀ ಪ್ರದೇಶದಲ್ಲಿ ಅಡ್ಡಾಡುವುದೇ ಒಂದು ರೋಮಾಂಚಕಾರಿ ಅನುಭವ. ಈ ಉತ್ಸವ ಉದ್ಘಾಟಿಸಿದವರು ಪ್ರಸಿದ್ಧ ಲೇಖಕ , ವಿಮರ್ಶಕರಾದ ಪ್ರೊ. ವಿ.ಸೀ ಅವರು. ಕನ್ನಡ ಚರ್ಚಾಸ್ಪರ್ಧೆಗೆ ಅಧ್ಯಕ್ಷರಾಗಿದ್ದವರು ಹಿರಿಯ ಲೇಖಕ, ಜನಪ್ರಿಯ ಅಧ್ಯಾಪಕರಾಗಿದ್ದ ಪ್ರೊ. ಕೆ.ವೆಂಕಟರಾಮಪ್ಪನವರು. ನಮ್ಮ ನಾಟಕ 'ಅಮ್ಮಾವ್ರ ಗಂಡ', ಶತಮಾನೋತ್ಸವ ಭವನದಲ್ಲಿ. ನಡೆಯಿತು. ಉತ್ಸವದ ಮೂರನೆಯ ದಿನ ಉಪಕುಲಪತಿಗಳ ಬಂಗಲೆಯ ಹೊರಾವರಣದಲ್ಲಿ ಎಲ್ಲ ಪ್ರತಿನಿಧಿಗಳಿಗೆ ಔತಣ.

ಅದೇ ವರ್ಷ (1970) ನಮ್ಮ ಕಾಲೇಜಿನ ಮೊದಲ (ಬಿ.ಎಸ್ಸಿ) ಬ್ಯಾಚ್ ಹೊರಬಿತ್ತು. ಪಾಸಾದವರು ನಾಲ್ಕು ಮಂದಿ (ಇಬ್ಬರು ವಿದ್ಯಾರ್ಥಿಗಳು, ಇಬ್ಬರು ವಿದ್ಯಾರ್ಥಿನಿಯರು). ಈ ಚಿತ್ರದಲ್ಲಿ ಇಬ್ಬರು ಹೆಚ್. ಆರ್ ತುಳಸೀ ಬಾಯಿ ಮತ್ತು ಎಸ್ ಸರಸ್ವತಿ (ನಿಂತವರಲ್ಲಿ ಎಡದಿಂದ ಕ್ರಮವಾಗಿ 4 ಮತ್ತು 5ನೆಯವರು) ಇದ್ದಾರೆ. ಈ ಚಿತ್ರದಲ್ಲಿ ಇರುವವರಲ್ಲಿ ನಾಲ್ಕು ಮಂದಿ ಈಗ ನಮ್ಮೊಡನಿಲ್ಲ. ಡಿ.ಕೆ.ವಿಶ್ವನಾಥ್, ಹೆಚ್. ಎಂ. ನಂಜುಂಡಸ್ವಾಮಿ ಮತ್ತು ಕನ್ನಡ ಉಪನ್ಯಾಸಕರಾಗಿದ್ದ ಟಿ. ಜಿ.ಬಸವಾರಾಧ್ಯ. (ಕುಳಿತವರಲ್ಲಿ ಎಡದಿಂದ ಮೂರು ಜನ) ಹಾಗೂ ಟಿ. ವಿ. ಶ್ರೀನಿವಾಸ ರಾವ್( ನಿಂತವರಲ್ಲಿ ಎಡದಿಂದ ಎರಡನೆಯವರು) ತೀರಿಕೊಂಡಿದ್ದಾರೆ. ನಿಂತವರಲ್ಲಿ ಎಡದಿಂದ ಆರನೆಯವರು ಲೇಖಕಿ ನಂ. ನಾಗಲಕ್ಷ್ಮಿ. ಎಲ್ಲರೂ ನಿವೃತ್ತರಾಗಿದ್ದಾರೆ. ಅನೇಕರು ಈ ಫೋಟೊವನ್ನು ಜತನದಿಂದ ಕಾಪಾಡಿಕೊಂಡಿದ್ದಾರೆ. ಫೋಟೊ ತೆಗೆಸುವುದು, ಪ್ರತಿ ಮಾಡಿಟ್ಟುಕೊಳ್ಳುವುದು ಇತ್ಯಾದಿಗಳ ಬಗ್ಗೆ ಆಗ ಈಗಿನಷ್ಟು ಗಮನ ನೀಡುತ್ತಿರಲಿಲ್ಲ. ಆಗ ಫೋಟೊ ಪ್ರತಿ ಮಾಡಿಸಿಕೊಂಡು ಇಟ್ಟುಕೊಳ್ಳುವುದು ದುಬಾರಿ ಎನಿಸಿದ್ದ ಕಾಲ ಕೂಡಾ.

ನಾವು ಯುವಜನೋತ್ಸವದಲ್ಲಿ ನಾಟಕದ ದೆಸೆಯಿಂದ ಭಾಗವಹಿಸಿದ್ದೆವು. ಅದೇ ಹವ್ಯಾಸವನ್ನು ಈವರೆಗೂ ಮುಂದುವರೆಸಿಕೊಂಡು ಬರುತ್ತಿದ್ದೇವೆ. ಎ.ಡಿ ಸಿಲ್ವಾ(ನಿಂತವರಲ್ಲಿ ಎಡದಿಂದ ಮೊದಲನೆಯವರು) ಮತ್ತು ಕೆ.ವೆಂಕಟರಾಜು (ಬಲದಿಂದ ಎರಡನೆಯವರು) ಕಾಲೇಜು ಬಿಟ್ಟ ತರುಣದಲ್ಲಿಯೇ (1973) ಸಮಾನಮನಸ್ಕ ಗೆಳೆಯರೊಡನೆ ಸೇರಿ ತಂಡ ಶಾಂತಲಾ ಕಲಾವಿದರು ತಂಡ ಕಟ್ಟಿದ್ದು, ಅದು ಇನ್ನೂ ಮುಂದುವರೆಯುತ್ತಿದೆ. ■